**All India Radio: Bangalore**
**National Bulletin In Kannada**
**17.12.2025  1.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**17.12.2025  1.10 p.m.**
**<><><><>**

ಮುಖ್ಯಾಂಶಗಳು

1. ಇಥಿಯೋಪಿಯಾ ಸಂಸತ್ತಿನ ಜಂಟಿ ಅಧಿವೇಶನವನ್ನುದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಭಾಷಣ; ವಸುಧೈವ ಕುಟುಂಬಕಂ ಪರಿಕಲ್ಪನೆ ಪುನರುಚ್ಚಾರ
2. ತಮಿಳುನಾಡು ವೆಲ್ಲೂರ್‌ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಆಗಮನ; ಶ್ರೀಪುರಂ ದೇವಾಲಯದಲ್ಲಿ ಧ್ಯಾನ ಮಂದಿರ ಉದ್ಘಾಟನೆ
3. ೨೦೨೪-೨೫ರಲ್ಲಿ ದಾಖಲೆಯ ಒಂದು ಶತಕೋಟಿ ಟನ್ ತಲುಪಿದ ಕಲ್ಲಿದ್ದಲು ಉತ್ಪಾದನೆ - ಕೇಂದ್ರ ಕಲ್ಲಿದ್ದಲು ಸಚಿವ ಜಿ.ಕಿಶನ್ ರೆಡ್ಡಿ
4. ಟಿ-೨೦ ಕ್ರಿಕೆಟ್ ಸರಣಿ; ನಾಲ್ಕನೇ ಪಂದ್ಯದಲ್ಲಿಂದು ಭಾರತ - ದಕ್ಷಿಣ ಆಫ್ರಿಕಾ ನಡುವೆ ಹಣಾಹಣಿ

<><><><>

‘ವಸುಧೈವ ಕುಟುಂಬಕಂ" ಎಂಬ ಘೋಷಣೆಯು ಜಗತ್ತು ಒಂದೇ ಕುಟುಂಬ ಎಂಬುದನ್ನು ಸಾರುತ್ತದೆ. ಇದು ರಾಜಕೀಯವನ್ನು, ಗಡಿಗಳನ್ನು, ವ್ಯತ್ಯಾಸಗಳನ್ನು ಮೀರಿ, ನಾವೆಲ್ಲರೂ ಸಾಮಾನ್ಯ ಮೂಲವನ್ನು ಹಂಚಿಕೊಳ್ಳುತ್ತವೆ ಎಂದು ನೆನಪಿಸುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಮೂರು ರಾಷ್ಟ್ರಗಳ ಪ್ರವಾಸದ ಭಾಗವಾಗಿ ಇಥಿಯೋಪಿಯಾ ತಲುಪಿರುವ ಪ್ರಧಾನಿ, ಇಂದು ಅಲ್ಲಿನ ಸಂಸತ್ತಿನ ಜಂಟಿ ಅಧಿವೇಶನವನ್ನುದ್ದೇಶಿಸಿ ಮಾತನಾಡಿದರು. ಈ ವೇಳೆ ಅವರು, ಇಥಿಯೋಪಿಯಾ ಮಾನವ ಇತಿಹಾಸದ ಅತ್ಯಂತ ಹಳೆಯ ನಾಗರಿಕತೆಗಳಲ್ಲಿ ಒಂದಾಗಿದೆ. ಹಳೆಯ ಮತ್ತು ಹೊಸದರ ಮಿಶ್ರಣ, ಪ್ರಾಚೀನ ಬುದ್ಧಿವಂತಿಕೆ ಮತ್ತು ಆಧುನಿಕ ಮಹತ್ವಾಕಾಂಕ್ಷೆಯ ನಡುವಿನ ಈ ಸಮತೋಲನ, ಇಥಿಯೋಪಿಯಾದ ನಿಜವಾದ ಶಕ್ತಿಯಾಗಿದೆ. ಭಾರತವು ಕೂಡ ಒಂದು ಪ್ರಾಚೀನ ನಾಗರಿಕತೆ, ಸಬ್ಕಾ ಸಾಥ್, ಸಬ್ಕಾ ವಿಕಾಸ್, ಸಬ್ಕಾ ವಿಶ್ವಾಸ್, ಸಬ್ಕಾ ಪ್ರಯಾಸ್ ಎಂಬ ಕರೆಯೊಂದಿಗೆ ಭವಿಷ್ಯದತ್ತ ಆತ್ಮವಿಶ್ವಾಸದಿಂದ ನಡೆಯುತ್ತಿದೆ. ಭಾರತದ

ರಾಷ್ಟ್ರೀಯ ಗೀತೆ, ವಂದೇ ಮಾತರಂ ಮತ್ತು ಇಥಿಯೋಪಿಯನ್ ರಾಷ್ಟ್ರಗೀತೆ ಎರಡೂ ನಮ್ಮ ಭೂಮಿಯನ್ನು ತಾಯಿ ಎಂದು ಉಲ್ಲೇಖಿಸುತ್ತವೆ ಎಂದರು.

**ಧ್ವನಿ: ಪ್ರಧಾನಿ ನರೇಂದ್ರ ಮೋದಿ ( ೨೦ ಸೆಕೆಂಡ್ಸ್)**

೧೯೪೧ ರಲ್ಲಿ ಇಥಿಯೋಪಿಯಾದ ವಿಮೋಚನೆಗಾಗಿ ಭಾರತೀಯ ಸೈನಿಕರು ಇಥಿಯೋಪಿಯನ್ನರ ಜೊತೆಗೆ ಹೋರಾಡಿದರು. ಭಾರತ ಸ್ವತಂತ್ರವಾದ ಕೂಡಲೇ ನಮ್ಮ ಔಪಚಾರಿಕ ರಾಜತಾಂತ್ರಿಕ ಸಂಬಂಧಗಳು ಪ್ರಾರಂಭವಾದವು. ಆದರೆ ರಾಯಭಾರ ಕಚೇರಿಗಳನ್ನು ಸ್ಥಾಪಿಸುವ ಮೊದಲೇ, ಸಾವಿರಾರು ಭಾರತೀಯ ಶಿಕ್ಷಕರು ಇಥಿಯೋಪಿಯಾಕ್ಕೆ ಬಂದು ಡೈರ್ ದಾವಾದ ಅಡಿಸ್ ಅಬಾಬಾದಲ್ಲಿ, ಬಹಿರ್ ದಾರ್ ನಿಂದ ಮೆಕೆಲ್ಲವರೆಗೆ ಮಕ್ಕಳಿಗೆ ಶಿಕ್ಷಣ ನೀಡಿದರು. ಇಥಿಯೋಪಿಯನ್ ಶಾಲೆಗಳನ್ನು ತಲುಪಿದ ಈ ಶಿಕ್ಷಕರನ್ನು ಅನೇಕ ಇಥಿಯೋಪಿಯನ್ ಪೋಷಕರು ತಮ್ಮ ಮಕ್ಕಳ ಭವಿಷ್ಯವನ್ನು ರೂಪಿಸಿದ ಬಗ್ಗೆ ಇಂದಿಗೂ ಪ್ರೀತಿಯಿಂದ ಮಾತನಾಡುತ್ತಾರೆ ಎಂದರು. ಇಂದು, ಇಥಿಯೋಪಿಯಾದ ದೊಡ್ಡ ವಿದೇಶಿ ಹೂಡಿಕೆದಾರರಲ್ಲಿ ಭಾರತೀಯ ಕಂಪನಿಗಳು ಸೇರಿವೆ. ಅವು ಜವಳಿ, ಉತ್ಪಾದನೆ, ಕೃಷಿ, ಆರೋಗ್ಯ ಮತ್ತು ಇತರ ವೈವಿಧ್ಯಮಯ ವಲಯಗಳಲ್ಲಿ ಐದು ಶತಕೋಟಿ ಡಾಲರ್‌ಗಳಿಗಿಂತ ಹೆಚ್ಚು ಹೂಡಿಕೆ ಮಾಡಿವೆ. ಮತ್ತು ಅವರು ೭೫ ಸಾವಿರಕ್ಕೂ ಹೆಚ್ಚು ಸ್ಥಳೀಯ ಉದ್ಯೋಗಗಳನ್ನು ಸೃಷ್ಟಿಸಿದ್ದಾರೆ. ನಿನ್ನೆ ದ್ವಿಪಕ್ಷೀಯ ಸಂಬಂಧವನ್ನು ಕಾರ್ಯತಂತ್ರದ ಪಾಲುದಾರಿಕೆಯ ಮಟ್ಟಕ್ಕೆ ಏರಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

<><><><>

ಇಥಿಯೋಪಿಯಾದ ಅತ್ಯುನ್ನತ ಗೌರವವಾದ 'ಗ್ರೇಟ್ ಆನರ್ ನಿಶಾನ್ ಆಫ್ ಇಥಿಯೋಪಿಯಾ' ಪ್ರಶಸ್ತಿಯನ್ನು ಪಡೆದ ಪ್ರಧಾನಿ ನರೇಂದ್ರ ಮೋದಿಯವರನ್ನು ಕೇಂದ್ರ ಆರೋಗ್ಯ ಸಚಿವ ಮತ್ತು ಹಿರಿಯ ಬಿಜೆಪಿ ನಾಯಕ ಜಗತ್ ಪ್ರಕಾಶ್ ನಡ್ಡಾ ಅಭಿನಂದಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಹಂಚಿಕೊಂಡಿರುವ ಸಚಿವ ಜೆ.ಪಿ.ನಡ್ಡಾ, ೧೪೦ ಕೋಟಿ ಭಾರತೀಯರಿಗೆ ಇದು ಅತ್ಯಂತ ಗೌರವದ ಕ್ಷಣವಾಗಿದೆ. ಈ ೨೮ನೇ ಅಂತಾರಾಷ್ಟ್ರೀಯ ಗೌರವವು, ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವದ ಮೇಲಿನ ವಿಶ್ವದ ನಂಬಿಕೆಯನ್ನು ಮತ್ತು ಜಾಗತಿಕ ವೇದಿಕೆಯಲ್ಲಿ ಏರುತ್ತಿರುವ ಭಾರತದ ಸ್ಥಾನಮಾನವನ್ನು ಪ್ರತಿಬಿಂಬಿಸುತ್ತಿದೆ ಎಂದು ತಿಳಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಭಿನಂದಿಸಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ಪ್ರಧಾನಿಯವರ

ರಾಜತಾಂತ್ರಿಕತೆಗೆ ವಿದೇಶಿ ರಾಷ್ಟ್ರವೊಂದು ನೀಡಿರುವ ೨೮ನೇ ಪ್ರಶಸ್ತಿ ಇದಾಗಿದೆ. ಇದು ಜಾಗತಿಕ ರಾಜತಾಂತ್ರಿಕತೆಯಲ್ಲಿ ಭಾರತದ ಉನ್ನತಿಯನ್ನು ಸೂಚಿಸುತ್ತದೆ. ಈ ಗೌರವವು ಭಾರತ ಮತ್ತು ಇಥಿಯೋಪಿಯಾ ನಡುವಿನ ಸ್ನೇಹದಲ್ಲಿ ಒಂದು ಮೈಲಿಗಲ್ಲಾಗಿ ಉಳಿಯಲಿದೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ಹೇಳಿದ್ದಾರೆ.

<><><><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಇಂದು ತಮಿಳುನಾಡಿನ ವೆಲ್ಲೂರಿಗೆ ಆಗಮಿಸಿದರು. ರಾಷ್ಟ್ರಪತಿಗಳನ್ನು ತಮಿಳುನಾಡು ರಾಜ್ಯಪಾಲ ಆರ್.ಎನ್.ರವಿ, ಅವರು ಆತ್ಮೀಯವಾಗಿ ಸ್ವಾಗತಿಸಿದರು. ರಾಷ್ಟ್ರಪತಿಗಳಿಗೆ ಶ್ರೀಪುರಂ ಅರಿಯೂರ್ ನಾರಾಯಣಿ ದೇವಾಲಯದ ಅರ್ಚಕರು ವಿಶೇಷ ಸ್ವಾಗತ ನೀಡಿದರು. ರಾಷ್ಟ್ರಪತಿಗಳು ದೇವಾಲಯದ ಆವರಣದಲ್ಲಿ ಧ್ಯಾನ ಮಂದಿರವನ್ನು ಉದ್ಘಾಟಿಸಿದರು. ಅವರು ಪೆರುಮಾಳ್ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಆರತಿ ಮಾಡಿದರು ಮತ್ತು ಗಣೇಶ ಮತ್ತು ಸ್ವರ್ಣಲಕ್ಷ್ಮಿ ದೇವಾಲಯದಲ್ಲಿ ಪ್ರಾರ್ಥನೆ ಸಲ್ಲಿಸಿದರು. ರಾಷ್ಟ್ರಪತಿಗಳಿಗೆ ಪೂರ್ಣ ಕುಂಭ ಸ್ವಾಗತ ನೀಡಲಾಯಿತು. ರಾಷ್ಟ್ರಪತಿಗಳು ದೇವಾಲಯ ಸಂಕೀರ್ಣದಲ್ಲಿ ಗಿಡ ನೆಟ್ಟರು. ಶ್ರೀಪುರಂ ಅರಿಯೂರ್ ನಾರಾಯಣಿ ದೇವಾಲಯವನ್ನು ವೆಲ್ಲೂರಿನಲ್ಲಿ ೧೦೦ ಎಕರೆ ಪ್ರದೇಶದಲ್ಲಿ ನಿರ್ಮಿಸಲಾಗಿದೆ. ದೇವಾಲಯವು ಚಿನ್ನದಿಂದ ಮಾಡಲ್ಪಟ್ಟಿದೆ. ಡಿಸೆಂಬರ್ ೧೮ ರಿಂದ ೨೨ ರವರೆಗೆ ಕರ್ನಾಟಕ, ತಮಿಳುನಾಡು ಮತ್ತು ತೆಲಂಗಾಣ ಸೇರಿದಂತೆ ದಕ್ಷಿಣ ರಾಜ್ಯಗಳ ಒಂದು ವಾರದ ಪ್ರವಾಸದ ಭಾಗವಾಗಿ ರಾಷ್ಟ್ರಪತಿಗಳು ಇಲ್ಲಿಗೆ ಭೇಟಿ ನೀಡಿದ್ದಾರೆ.

<><><><>

೨೦೨೪-೨೫ರಲ್ಲಿ ದೇಶದಲ್ಲಿ ಮೊದಲ ಬಾರಿಗೆ ಕಲ್ಲಿದ್ದಲು ಉತ್ಪಾದನೆಯು ಸುಮಾರು ಒಂದು ಶತಕೋಟಿ ಟನ್ ತಲುಪಿದೆ ಎಂದು ಕೇಂದ್ರ ಕಲ್ಲಿದ್ದಲು ಸಚಿವ ಜಿ.ಕಿಶನ್ ರೆಡ್ಡಿ ತಿಳಿಸಿದ್ದಾರೆ. ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಪೂರಕ ಪ್ರಶ್ನೆಗಳಿಗೆ ಉತ್ತರಿಸಿದ ಸಚಿವರು, ಕಳೆದ ಹತ್ತು ವರ್ಷಗಳಲ್ಲಿ ಕಲ್ಲಿದ್ದಲು ವಲಯದಲ್ಲಿ ಹಲವಾರು ಪ್ರಮುಖ ಸುಧಾರಣೆಗಳನ್ನು ಕೈಗೊಳ್ಳಲಾಗಿದೆ. ಸರ್ಕಾರವು ಎಲ್ಲಾ ವಲಯಗಳಲ್ಲಿ ಕಲ್ಲಿದ್ದಲು ಉತ್ಪಾದನೆ ಮತ್ತು ಪೂರೈಕೆಯನ್ನು ಖಚಿತಪಡಿಸುತ್ತಿದೆ. ಪ್ರಸ್ತುತ ವಿಶ್ವದ ಎರಡನೇ ಅತಿದೊಡ್ಡ ಕಲ್ಲಿದ್ದಲು ಉತ್ಪಾದಕ ಮತ್ತು ಬಳಕೆದಾರ ರಾಷ್ಟ್ರವಾಗಿರುವ ಭಾರತ, ಜಾಗತಿಕವಾಗಿ ಐದನೇ ಅತಿದೊಡ್ಡ ಕಲ್ಲಿದ್ದಲು ನಿಕ್ಷೇಪಗಳನ್ನು ಹೊಂದಿದೆ ಮತ್ತು ಸುಮಾರು ಏಳು ವರ್ಷಗಳವರೆಗೆ ಸಾಕಾಗುವಷ್ಟು ಕಲ್ಲಿದ್ದಲು

ನಿಕ್ಷೇಪಗಳನ್ನು ಹೊಂದಿದೆ ಎಂದು ಅವರು ಮಾಹಿತಿ ನೀಡಿದರು. ಸರ್ಕಾರವು ಕಲ್ಲಿದ್ದಲು ಅನಿಲೀಕರಣ ಮಿಷನ್‌ನಲ್ಲಿ ಕೆಲಸ ಮಾಡುತ್ತಿದೆ ಮತ್ತು ೨೦೩೦ ರ ವೇಳೆಗೆ ಈ ಮಿಷನ್ ೧೦೦ ಮಿಲಿಯನ್ ಟನ್‌ಗಳನ್ನು ಸಾಧಿಸಲು ಸಜ್ಜಾಗಿದೆ ಎಂದು ಸಚಿವರು ಹೇಳಿದರು. ದೇಶದಲ್ಲಿ ಮೊದಲ ಬಾರಿಗೆ ಭೂಗತ ಕಲ್ಲಿದ್ದಲು ಅನಿಲೀಕರಣ ಬ್ಲಾಕ್‌ಗಳನ್ನು ಹರಾಜು ಮಾಡಲಾಗಿದೆ ಎಂದು ಅವರು ತಿಳಿಸಿದರು.

<><><>

ಭಾರತೀಯ ರೈಲ್ವೆಯಲ್ಲಿ ಎರಡು ಸಾವಿರ ರೂಟ್ ಕಿಲೋಮೀಟರ್‌ಗಳಿಗೂ ಹೆಚ್ಚು ಕವಚ್ ವ್ಯವಸ್ಥೆಯನ್ನು ನಿಯೋಜಿಸಲಾಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಲೋಕಸಭೆಯಲ್ಲಿಂದು ಪ್ರಶ್ನೋತ್ತರ ಅವಧಿಯಲ್ಲಿ ಪೂರಕಗಳಿಗೆ ಉತ್ತರಿಸಿದ ಸಚಿವ ಅಶ್ವಿನಿ ವೈಷ್ಣವ್, ಪ್ರಯಾಣಿಕರ ಸುರಕ್ಷತೆ ಮತ್ತು ರೈಲು ಕಾರ್ಯಾಚರಣೆಯನ್ನು ಹೆಚ್ಚಿಸಲು ಸ್ವಯಂಚಾಲಿತ ರೈಲು ರಕ್ಷಣಾ ವ್ಯವಸ್ಥೆ, ಕವಚ್ ಅನ್ನು ಪರಿಚಯಿಸಲಾಗಿದೆ.  ರೈಲ್ವೆ ನಾಲ್ಕು ಸಾವಿರದ ೧೫೪ ಲೋಕೋಮೋಟಿವ್‌ಗಳಲ್ಲಿ ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ಕವಚ್ ರೈಲು ರಕ್ಷಣಾ ವ್ಯವಸ್ಥೆಯನ್ನು ಯಶಸ್ವಿಯಾಗಿ ಸ್ಥಾಪಿಸಿದೆ ಎಂದು ಹೇಳಿದರು. ಕವಚ್‌ನ ಪ್ರಗತಿ ತುಂಬಾ ವೇಗವಾಗಿದೆ. ೪೦ ಸಾವಿರಕ್ಕೂ ಹೆಚ್ಚು ತಂತ್ರಜ್ಞರು ಮತ್ತು ನಿರ್ವಾಹಕರಿಗೆ ಈಗಾಗಲೇ ಕವಚ್ ವ್ಯವಸ್ಥೆಗಳ ಬಗ್ಗೆ ತರಬೇತಿ ನೀಡಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

<><><>

ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಅವರು ಇಂದು ಭೂತಾನಿನ ವಿದೇಶಾಂಗ ಸಚಿವ ಲಿಯಾನ್ಪೊ ಡಿ.ಎನ್. ಧುಂಗ್ಯೆಲ್ ಮತ್ತು ಭೂತಾನಿನ ಜನರಿಗೆ ಅವರ ರಾಷ್ಟ್ರೀಯ ದಿನವಾದ ಗ್ಯಾಲ್ಪೊಂಗ್ ಡುಚೆನ್‌ನ ಶುಭಾಶಯ ಕೋರಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮ ಪೋಸ್ಟ್ ಮಾಡಿರುವ ಡಾ.ಎಸ್.ಜೈಶಂಕರ್, ಭಾರತವು ಉಭಯ ದೇಶಗಳ ನಡುವಿನ ವಿಶಿಷ್ಟ ಪಾಲುದಾರಿಕೆಯ ನಿರಂತರ ಅಭಿವೃದ್ಧಿಗೆ ಬದ್ಧವಾಗಿದೆ ಎಂದು ತಿಳಿಸಿದ್ದಾರೆ.

<><><>

ಪ್ರಾಚೀನ ದೇವಾಲಯಗಳು, ಪಾರಂಪರಿಕ ತಾಣಗಳು ಮತ್ತು ರಾಷ್ಟ್ರೀಯ ಸ್ಮಾರಕಗಳ ವ್ಯಾಪಕ ಪುನರಾಭಿವೃದ್ಧಿಯೊಂದಿಗೆ ಭಾರತ, ಕಳೆದ ದಶಕದಲ್ಲಿ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ

ಪುನರುಜ್ಜೀವನಕ್ಕೆ ಸಾಕ್ಷಿಯಾಗಿದೆ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ಡಾ.ವೀರೇಂದ್ರ ಕುಮಾರ್ ಹೇಳಿದ್ದಾರೆ.

<><><><>

ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಐದು ಪಂದ್ಯಗಳ ಅಂತಾರಾಷ್ಟ್ರೀಯ ಟಿ-೨೦ ಕ್ರಿಕೆಟ್ ಸರಣಿಯ ನಾಲ್ಕನೇ ಪಂದ್ಯ, ಇಂದು ಲಕ್ನೋದ ಅಟಲ್ ಬಿಹಾರಿ ವಾಜಪೇಯಿ ಏಕಾನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿದೆ. ಪಂದ್ಯ, ಸಂಜೆ ೭ ಗಂಟೆಗೆ ಪ್ರಾರಂಭವಾಗಲಿದೆ. ಐದು ಪಂದ್ಯಗಳ ಸರಣಿಯಲ್ಲಿ ಭಾರತ ೨-೧ ಅಂತರದಲ್ಲಿ ಮುನ್ನಡೆ ಸಾಧಿಸಿದ್ದು, ಸರಣಿಯನ್ನು ವಶಪಡಿಸಿಕೊಂಡು ದಕ್ಷಿಣ ಆಫ್ರಿಕಾ ವಿರುದ್ಧ ೩-೧ ಅಂತರದಲ್ಲಿ ಮುನ್ನಡೆ ಸಾಧಿಸುವ ಗುರಿ ಹೊಂದಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>